ದಿನಾಂಕ 30.01.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು ಃ ಶ್ರೀ ಎಸ್.ಬಿ ವಕೀಲರಿಂದಃ**

ನನ್ನ ವಿರುದ್ಧ ನನ್ನ ಚಿಕ್ಕಮ್ಮ ದಾವೆ ಹಾಕಿದ್ದು, ಅದು ಚಾಲ್ತಿಯಲ್ಲಿದೆ. ನಾನು ೪-೫ ವರ್ಷಗಳ ಹಿಂದೆಯಿಂದಲೂ ಸಹ ಆ ದಾವೆಗೆ ಬರುತ್ತಿದ್ದೇನೆಎಂದರೆ ನಿಜ. ೪ ನೇ ಪ್ರತಿವಾದಿಯ ಜೊತೆ ನನ್ನ ಚಿಕ್ಕಮ್ಮ ಆದ ಸಣ್ಣಮ್ಮ ಇವರು ಚೆನ್ನಾಗಿದ್ದಾರೆ ಎಂದರೆ ನಿಜ. ಆ ಕಾರಣದಿಂದ ನನಗೂ ಮತ್ತು ೪ ನೇ ಪ್ರತಿವಾದಿಗೆ ವೈಮನಸ್ಸು ಇದೆ ಎಂದರೆ ಸರಿಯಲ್ಲ, ಆ ಕಾರಣದಿಂದ ನಾನು ೪ ನೇ ಪ್ರತಿವಾದಿಯ ವಿರುದ್ಧ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ, ಎಷ್ಟು ಆಸ್ತಿಗಳ ಮೇಲೆ ದಾವೆ ಹಾಕಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ, ಅವುಗಳ ವಿಸ್ತೀರ್ಣ ಸಹ ನನಗೆ ಗೊತ್ತಿಲ್ಲ, ದಾವಾಸ್ತಿಗಳ ಚಕ್ಕುಬಂದಿ ಗೊತ್ತಿಲ್ಲ, ದಾವಾಸ್ತಿಗಳ ಸುತ್ತಮುತ್ತ ನನಗೆ ಜಮೀನು ಇರುವುದಿಲ್ಲ, ಚಿಕ್ಕದಾಸಪ್ಪನ ಮಕ್ಕಳ ಮನೆಯ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ.

೪ ನೇ ಪ್ರತಿವಾದಿ ಜೀವಂತ ಇದ್ದಾರೆ ಎಂದರೆ ನಿಜ. ದಾವಾಸ್ತಿಗಳು ಚಿಕ್ಕದಾಸಪ್ಪನ ಮಕ್ಕಳಿಗೆ ಹೇಗೆ ಬಂದಿದ್ದವು ಎನ್ನುವುದು ನನಗೆ ಗೊತ್ತಿಲ್ಲ, ಯಾರು ಯಾರು ಯಾವ ಯಾವ ಆಸ್ತಿಗಳು ಅನುಭವಿಸುತ್ತಿದ್ದರೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಪಂಚಾಯಿತಿ ಪಾಲುಪತ್ರ ಆಗಿದೆ ಎಂದು ಹೇಳಿದ್ದು ಅದನ್ನು ನಾನು ನೋಡಿಲ್ಲ, ಪಂಚಾಯಿತಿ ಪಾಲು ಪತ್ರ ಮಾಡುವಾಗ ನಾನು ಇರಲಿಲ್ಲ, ದಾವಾ ಐಟಂ ನಂ ೧ ಮತ್ತು ೨ ಚಿಕ್ಕದಾಸಪ್ಪನ ಮಕ್ಕಳ ಒಟ್ಟು ಕುಟುಂಬದ ಸ್ವತ್ತುಗಳು ಆಗಿರಲಿಲ್ಲ ಎಂದರೆ ಸರಿಯಲ್ಲ, ಆ ಸ್ವತ್ತುಗಳು ಈರಮರಿಯಪ್ಪನ ಸ್ವಯಾರ್ಜಿತ ಆಸ್ತಿಗಳು ಆಗಿದ್ದವು ಎಂದರೆ ಸರಿಯಲ್ಲ, ದಾವಾ ಐಟಂ ನಂ ೧ ಮತ್ತು ೨ ರಲ್ಲಿ ಚಿಕ್ಕದಾಸಪ್ಪನ ಮಕ್ಕಳು ಜಂಟಿಯಾಗಿ ಯಾವತ್ತೂ ಸಹ ಅನುಭವ ಮಾಡಿರಲಿಲ್ಲ ಎಂದರೆ ಸರಿಯಲ್ಲ, ನಾನು ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ವಾದಿಯರು ಮತ್ತು ಪ್ರತಿವಾದಿಯರು ನನಗೆ ಸಂಬಂಧಿಕರು. ದಾವಾ ಐಟಂ ನಂ ೧ ಮತ್ತು ೨ ಮೊದಲಿಗೆ ಸರ್ಕಾರಿ ಜಮೀನು ಎಂದರೆ ಗೊತ್ತಿಲ್ಲ, ಈ ೨ ಆಸ್ತಿಗಳು ಚಿಕ್ಕದಾಸಪ್ಪನ ಮೊದಲನೇ ಮಗ ಈರಮರಿಯಪ್ಪನಿಗೆ ಸರ್ಕಾರದಿಂದ ಮಂಜೂರಾಗಿದ್ದವು ಎಂದರೆ ಗೊತ್ತಿಲ್ಲ, ದಾವಾ ಐಟಂ ನಂ ೧ ಮತ್ತು ೨ ಆಸ್ತಿಗಳು ಆತನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ, ಈ ೨ ಆಸ್ತಿಗಳ ಕಂದಾಯ ದಾಖಲಾತಿಗಳು ಆತನ ಹೆಸರಿಗೆ ಇದ್ದವು ಎಂದರೆ ಗೊತ್ತಿಲ್ಲ,

ದಾವಾ ಐಟಂ ನಂ ೧ ರ ಸ್ವತ್ತು ಸದರಿ ಈರಮರಿಯಪ್ಪ ಈತನು ಶಿರಾದ ಸಂತೇಪೇಟೆಯ ಪೂಜಾರಿ ಗಿರಿಯಪ್ಪನ ಮಗ ಗೋವಿಂದಪ್ಪ ಈತನಿಗೆ ದಿಃ೦೪.೦೫.೧೯೮೧ ರಲ್ಲಿ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ, ಅಂದಿನಿಂದ ಆತ ಮೃತಪಡುವವರೆವಿಗೂ ಆ ಆಸ್ತಿಯಲ್ಲಿ ಆತನೇ ಸ್ವಾಧೀನ ಹೊಂದಿದ್ದ ಎಂದರೆ ಸರಿಯಲ್ಲ, ಆತ

ಮೃತಪಟ್ಟ ಬಳಿಕ ಆತನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಕಂದಾಯ ದಾಖಲಾತಿಗಳು ವರ್ಗಾವಣೆ ಆಗಿದ್ದವು ಮತ್ತು ಅವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ನಂತರ ಸದರಿ ಗೋವಿಂದಪ್ಪನ ಹೆಂಡತಿ ಮತ್ತು ಮಕ್ಕಳು ೪ ನೇ ಪ್ರತಿವಾದಿಗೆ ದಿ:೨೪.೦೧.೨೦೦೪ ರಂದು ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಅದೇ ದಿನ ೪ ನೇ ಪ್ರತಿವಾದಿಗೆ ಅದರ ಸ್ವಾಧೀನ ಸಹ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ೪ ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲಾತಿಗಳು ಬದಲಾವಣೆ ಆಗಿವೆ ಎಂದರೆ ಗೊತ್ತಿಲ್ಲ.

ದಾವಾ ಐಟಂ ನಂ ೨ ರ ಸ್ವತ್ತು ಚಿಕ್ಕದಾಸಪ್ಪನ ಮಗ ಈರಮರಿಯಪ್ಪ ೫ ನೇ ಪ್ರತಿವಾದಿಗೆ ದಿ:೧೩.೦೪.೧೯೯೩ ರಲ್ಲಿ ಶುದ್ಧಕ್ರಯಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ದಿನ ಸ್ವಾಧೀನ ಸಹ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆಕೆಯ ಹೆಸರಿಗೆ ಕಂದಾಯ ದಾಖಲಾತಿಗಳು ಸಹ ಆಗಿವೆ ಎಂದರೆ ಗೊತ್ತಿಲ್ಲ. ೫ ನೇ ಪ್ರತಿವಾದಿಗೆ ಚಿತ್ತಮ್ಮ ಎಂದು ಸಹ ಕರೆಯುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ ೧ ಮತ್ತು ೨ ರಲ್ಲಿ ೪ ಮತ್ತು ೫ ನೇ ಪ್ರತಿವಾದಿಯೇ ಕ್ರಯ ಆದ ದಿನದಿಂದ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.